# ಶ್ರೀ ಮುರುಘಾಮಠದಲ್ಲಿ ಕಂಕಣ ಸೂರ್ಯಗ್ರಹಣ ವೀಕ್ಷಣೆ ಕಾರ್ಯಕ್ರಮ

**ಚಿತ್ರದುರ್ಗ, ಜೂ. 21** - ಸೂರ್ಯಗ್ರಹಣ, ಚಂದ್ರಗ್ರಹಣ ಅಥವಾ ಇಂತಹ ಇನ್ನಿತರೆ ಪ್ರಕ್ರಿಯೆಗಳು ಬ್ರಹ್ಮಾಂಡದಲ್ಲಿ ನಡೆಯುವ ನಿಸರ್ಗದತ್ತವಾದ ಚಲನೆಗಳಾಗಿವೆ. ವಿಜ್ಞಾನಿಗಳು ಹೇಳಿದ ಹಾಗೆ ಕನ್ನಡಕ ಹಾಕಿಕೊಂಡು ನೋಡಿದರೆ ತೊಂದರೆ ಆಗುವುದಿಲ್ಲ. ಸೂರ್ಯಗ್ರಹಣದ ಸಂದರ್ಭದಲ್ಲಿ ಏನೂ ಅಮಂಗಲ ಆಗುವುದಿಲ್ಲ ಎಂದು ಡಾ. ಶಿವಮೂರ್ತಿ ಮುರುಘಾ ಶರಣರು ಅಭಿಪ್ರಾಯಪಟ್ಟರು.

ಶ್ರೀಮುರುಘಾಮಠದಲ್ಲಿ ಏರ್ಪಡಿಸಲಾಗಿದ್ದ ಕಂಕಣ ಸೂರ್ಯಗ್ರಹಣವನ್ನು ಸಹಭೋಜನದೊಂದಿಗೆ ವೀಕ್ಷಣೆ ಮಾಡುವ ಕಾರ್ಯಕ್ರಮದಲ್ಲಿ ಮಾತನಾಡುತ್ತ, ಜಗತ್ತಿನ ದಾರ್ಶನಿಕರು ಅನಿಷ್ಟಗಳನ್ನು ವಿಮೋಚನೆ ಮಾಡಿದರು. ಅಸ್ಪøಶ್ಯತೆ, ದಾಸ್ಯದ ವಿಮೋಚನೆ ಮಾಡಿ ಸಮಾನತೆ ತಂದರು. ಅಮಂಗಲ ಸೂರ್ಯ ಚಂದ್ರ ನಕ್ಷತ್ರ ತಾರೆಯೊಳಗಿಲ್ಲ. ಅಮಂಗಲವು ಕುತಂತ್ರ, ಕುಬುದ್ಧಿ, ಮಾಡುವವರ ಮೆದುಳಿನಲ್ಲಿದೆ. ಜನರಲ್ಲಿರುವ ಗ್ರಹಣ ಬಿಡಿಸಿ ಆರೋಗ್ಯಪೂರ್ಣ ಸಮಾಜ ಕಟ್ಟೋಣ ಎಂದರು.

ಶ್ರೀ ಬಸವನಾಗಿದೇವ ಸ್ವಾಮಿಗಳು, ಶ್ರೀ ಕೇತೇಶ್ವರ ಸ್ವಾಮಿಗಳು, ದಾವಣಗೆರೆ ವಿರಕ್ತಮಠದ ಶ್ರೀ ಬಸವಪ್ರಭು ಸ್ವಾಮಿಗಳು, ಮಡಿವಾಳ ಗುರುಪೀಠದ ಶ್ರೀ ಮಾಚಿದೇವ ಸ್ವಾಮಿಗಳು, ವಕೀಲರಾದ ರಹಮತ್‍ವುಲ್ಲಾ, ಶೇಷಣ್ಣಕುಮಾರ್, ನಿರಂಜನಮೂರ್ತಿ, ಎಸ್.ಜೆ.ಎಂ.. ವಿದ್ಯಾಪೀಠದ ಕಾರ್ಯದರ್ಶಿ ಎ.ಜೆ. ಪರಮಶಿವಯ್ಯ, ಕಾರ್ಯನಿರ್ವಹಣಾಧಿಕಾರಿ ಎಂ.ಜಿ. ದೊರೆಸ್ವಾಮಿ  ಮೊದಲಾದವರು ಇದ್ದರು. ಸೂರ್ಯಗ್ರಹಣವನ್ನು ವೀಕ್ಷಿಸಿದ ನಂತರ ಸಹಪಂಕ್ತಿ ಭೋಜನ ನಡೆಯಿತು.




ಅನುಭವ ಮಂಟಪ



